**ಮೀನುಗಾರಿಕೆ ಇಲಾಖೆ**

**ವಾರ್ಷಿಕ ವರದಿ 2022–23**

**ಸಾಧನೆಗಳ ಸಂಕ್ಷಿಪ್ತ ವಿವರ**

1.1 ಮೀನುಗಾರಿಕೆಯು ಪೌಷ್ಠಿಕ ಆಹಾರ, ವಿದೇಶಿ ವಿನಿಮಯ ಹಾಗೂ ಉದ್ಯೋಗಾವಕಾಶದ ಸೃಷ್ಠಿಯ ಮೂಲವಾಗಿರುವುದರಿಂದ ರಾಜ್ಯದ ಹಾಗೂ ದೇಶದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ.

1.2 ಕರ್ನಾಟಕ ರಾಜ್ಯವು 3.02 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣವುಳ್ಳ ಕೆರೆ, ಕೊಳಗಳನ್ನು ಮತ್ತು 2.72 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯಗಳನ್ನೊಳಗೊಂಡು ಒಟ್ಟು 5.74ಲಕ್ಷ ಹೆಕ್ಟೇರಿನಷ್ಟು ವಿಸ್ತೀರ್ಣವುಳ್ಳ ಒಳನಾಡು ಜಲ ಸಂಪನ್ಮೂಲವನ್ನು ಹೊಂದಿದೆ. ಇದರ ಜೊತೆಗೆ 8000 ಹೆಕ್ಟೇರಿನಷ್ಟು ಹಿನ್ನೀರು ಪ್ರದೇಶ, 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶ ಹಾಗೂ 27,000 ಚ. ಕಿ.ಮೀ. ವಿಸ್ತೀರ್ಣದ ವಿಶಾಲವಾದ ಭೂಖಂಡ ಪ್ರದೇಶವನ್ನು ಹೊಂದಿದ್ದು, ಮೀನುಗಾರಿಕೆಯ ಅಭಿವೃದ್ಧಿಗೆ ವಿಪುಲ ಅವಕಾಶ ಹೊಂದಿರುತ್ತದೆ.

1.3 ಕರ್ನಾಟಕ ರಾಜ್ಯವು ಒಟ್ಟು 9.84 ಲಕ್ಷ ಮೀನುಗಾರರನ್ನು ಹಾಗೂ 729 ಮೀನುಗಾರರ ಸಹಕಾರ ಸಂಘಗಳನ್ನು ಒಳಗೊಂಡಿದೆ (132 ಕರಾವಳಿ ಮತ್ತು 597 ಒಳನಾಡು) ಅದರಲ್ಲಿ 667 ಸಂಘಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. (127 ಕರಾವಳಿ ಮತ್ತು 540 ಒಳನಾಡು)

1.4 2022–23 ನೇ ಸಾಲಿನಲ್ಲಿ ಕಡಲ ಮೀನು ಉತ್ಪಾದನೆಯು 7.30 ಲಕ್ಷ ಮೆಟ್ರಿಕ್ ಟನ್‌ಗಳಷ್ಟಾಗಿರುತ್ತದೆ. ಕಡಲ ಮೀನುಗಾರಿಕೆಯಲ್ಲಿ 4646 ಯಾಂತ್ರೀಕೃತ ದೋಣಿಗಳು, 10961 ಮೋಟಾರೀಕೃತ ದೋಣಿಗಳು ಮತ್ತು 8657 ಸಾಂಪ್ರದಾಯಿಕ ದೋಣಿಗಳಿವೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ರಾಜ್ಯದ ಒಟ್ಟು ಕಡಲ ಮೀನು ಉತ್ಪಾದನೆಯಲ್ಲಿ ಶೇಕಡ 85ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀನನ್ನು ಹಿಡಿಯುತ್ತಿವೆ.

1.5 2021–22 ನೇ ಸಾಲಿನಲ್ಲಿ ರಾಜ್ಯದಿಂದ ರೂ.1962.19 ಕೋಟಿ ಮೌಲ್ಯದ 120427 ಮೆಟ್ರಿಕ್ ಟನ್‌ಗಳಷ್ಟು ಸಾಗರೋತ್ಪನ್ನಗಳನ್ನು ರಫ್ತು ಮಾಡಲಾಗಿದೆ.

1.6 "ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಡೀಸೆಲ್– ಮಾರಾಟ ತೆರಿಗೆ ಮರುಪಾವತಿ" ಎಂಬ ಯೋಜನೆಯಡಿ 2022–23ನೇ ಸಾಲಿನಲ್ಲಿ ಒಟ್ಟು 1.74 ಲಕ್ಷ ಕಿಲೋ ಲೀಟರ್ ಡೀಸೆಲನ್ನು 3456 ಯಾಂತ್ರೀಕೃತ ಮೀನುಗಾರಿಕಾ ದೋಣಿಗಳಿಗೆ ಅನುಮೋದಿತ ಡೀಸೆಲ್ ಬಂಕ್‌ಗಳಿಂದ ನೇರವಾಗಿ ವಿತರಿಸಲಾಗಿದೆ.

1.7 ಕರಾವಳಿಯಲ್ಲಿ ಪರ್ಮಿಟ್ ಪಡೆದ 8030 ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಮಾಸಿಕ 1355 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ನೀಡಲಾಗುತ್ತಿದೆ. 2022–23 ನೇ ಸಾಲಿನಲ್ಲಿ ಒಟ್ಟು 9172 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರ ದರದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ನೀಡಲಾಗಿದೆ.

1.8 ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಮೀನುಗಾರರಿಗೆ ರೂ.50,000 ಗಳವರೆಗೆ ಶೇ.2ರ ಬಡ್ಡಿ ದರದಲ್ಲಿ ಸಾಲವನ್ನು ನೀಡಲಾಗುತ್ತಿದೆ (ಮಹಿಳೆಯರಿಗೆ 0%). 2022–23ನೇ ಸಾಲಿನಲ್ಲಿ 3441 ಫಲಾನುಭವಿಗಳಿಗೆ ರೂ.50.00 ಲಕ್ಷಗಳ ಬಡ್ಡಿ ಮೊತ್ತವನ್ನು ಸಾಲ ಪಡೆದ ಬ್ಯಾಂಕ್ ಗಳಿಗೆ ಪಾವತಿಸಲಾಗಿದೆ.

1.9 ನೀಲಿಕ್ರಾಂತಿ/ಪಿ.ಎಮ್.ಎಮ್.ಎಸ್.ವೈ.–ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆಯಡಿ ಕರಾವಳಿ ಮೀನುಗಾರಿಕೆ, ಮೂಲಭೂತ ಸೌಲಭ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳ ಅಭಿವೃದ್ಧಿ, ಮೀನುಗಾರರ ಕಲ್ಯಾಣಕ್ಕಾಗಿ ರಾಷ್ಟ್ರೀಯ ಯೋಜನೆ, ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ, ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಅದರ ಚಟುವಟಿಕೆಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ 40% ಮತ್ತು ಪ.ಜಾ/ ಪ.ಪಂ/ ಮಹಿಳೆಯರಿಗೆ 60% ಸಹಾಯಧನವನ್ನು ನೀಡಲಾಗುತ್ತದೆ.

1.10 ಮೀನು ಮರಿಗಳ ಸಾಕಣೆಯನ್ನು ಪ್ರೋತ್ಸಾಹಿಸಲು ಜಲಾಶಯಗಳ/ಕೆರೆಗಳ ಅಂಚಿನಲ್ಲಿ ಮೀನುಮರಿಗಳ ಸಾಕಣೆ ಕೊಳಗಳ ನಿರ್ಮಾಣಕ್ಕೆ ಗರಿಷ್ಟ ರೂ.2.50 ಲಕ್ಷ ಸಹಾಯಧನ ನೀಡುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಯಡಿ 10.00ಹೆಕ್ಟೇರ್ ಮೀನುಮರಿಗಳ ಸಾಕಣೆಯ ಕೊಳಗಳ ನಿರ್ಮಾಣಕ್ಕೆ ರೂ.25.00 ಲಕ್ಷ ಸಹಾಯಧನ ನೀಡಲಾಗಿದೆ.

1.11 ರಾಜ್ಯದ 38 ಜಲಾಶಯಗಳಲ್ಲಿ 583.56 ಲಕ್ಷ ಬಲಿತ ಗೆಂಡೆ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ.

1.12 ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು 1250 ಮೀನುಗಾರರಿಗೆ ರೂ. 124.92 ಲಕ್ಷ ವೆಚ್ಚದಲ್ಲಿ ವಿತರಿಸಲಾಗಿದ್ದು, ಸದರಿ ಸಲಕರಣೆಗಳನ್ನು ಶೇ.100 ಆರ್ಥಿಕ ನೆರವಿನೊಂದಿಗೆ ನೀಡಲಾಗಿದೆ.

1.13 ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ ಯೋಜನೆಯಡಿ 180 ಮಂಜುಗಡ್ಡೆ ಸ್ಥಾವರಗಳಿಗೆ ರೂ.400.00 ಲಕ್ಷ ಆರ್ಥಿಕ ನೆರವು ನೀಡಲಾಗಿದೆ.

1.14 ಉಳಿತಾಯ ಮತ್ತು ಪರಿಹಾರ ಯೋಜನೆಯಡಿ ಸುಮಾರು 20400 ಮೀನುಗಾರರರಿಗೆ ರೂ.612.00 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ.

1.15 ಮೀನುಗಾರರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ರೂ. 20413.00 ಲಕ್ಷಗಳ ಮಂಜೂರಾತಿಯೊಂದಿಗೆ 12,753 ಕಿಸ್ಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

1.16 2022–23ನೇ ಸಾಲಿನಲ್ಲಿ ಮೀನುಗಾರಿಕೆ ಸಾಲಮನ್ನಾ ಯೋಜನೆಯಡಿ 162 ಮೀನುಗಾರರರಿಗೆ ರೂ.30.20 ಲಕ್ಷಗಳನ್ನು ಪಾವತಿಸಲಾಗಿದೆ.


1.17 ಮೀನುಗಾರಿಕೆ ವಲಯದಲ್ಲಿ, 2021–22ರಲ್ಲಿ ರಾಜ್ಯದಾದ್ಯಂತ 53 ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳನ್ನು (ಅಮೃತ್ ಎಫ್‌ಪಿಒ) ಹಾಗೂ 2022–23ನೇ ಸಾಲಿನಲ್ಲಿ 09 ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳನ್ನು ನೋಂದಾಯಿಸಲಾಗಿದೆ.

1.18 ನಬಾರ್ಡ್ ನೆರವಿನ ಆರ್‌ಐಡಿಎಫ್ ಯೋಜನೆಯಡಿ ಆರ್‌ಐಡಿಎಫ್ ಟ್ರಾಂಚ್ 28ರ ಅಡಿಯಲ್ಲಿ ರೂ. 40.00ಕೋಟಿ ಯೋಜನಾ ವೆಚ್ಚದಲ್ಲಿ 03 ಯೋಜನೆಗಳಿಗೆ ಅನುಮೋದನೆ ದೊರೆತಿರುತ್ತದೆ.

**1.19** ರಾಜ್ಯದ 4000 ಕಿ.ಮೀಗಳ ನದಿ ಭಾಗಗಳಲ್ಲಿ ಮೀನು ಸಂಪನ್ಮೂಲವನ್ನು ಅಭಿವೃದ್ಧಿಪಡಿಸಲು NFDBವತಿಯಿಂದ 32 ಸ್ಥಳಗಳಲ್ಲಿ ರೂ.120.00 ಲಕ್ಷ ವೆಚ್ಚದಲ್ಲಿ ಮೀನಮರಿಗಳನ್ನು ಬಿತ್ತನೆ ಮಾಡುವ ಯೋಜನೆಯನ್ನು ಮಂಜೂರು(river ranching)ಮಾಡಲಾಗಿದೆ.

**1.20** 2022–23ನೇ ಸಾಲಿನಲ್ಲಿ 5927 ಗ್ರಾಮ ಪಂಚಾಯತಿ ಕೆರೆಗಳಲ್ಲಿ ರೂ.426.00 ಲಕ್ಷಗಳ ಅನುದಾನದಲ್ಲಿ 3.16 ಕೋಟಿ ಮೀನುಮರಿಗಳನ್ನು ದಾಸ್ತಾನು ಮಾಡಲಾಗಿದೆ.

**1.21 ಮೀನುಗಾರಿಕೆ ಇಲಾಖೆಯ ಆಡಳಿತ ರೂಪರೇಷೆ**




ಮೀನುಗಾರಿಕೆ ಇಲಾಖೆಯು ಮೀನುಗಾರಿಕೆ ಸಚಿವರ ಆಡಳಿತ ವ್ಯಾಪ್ತಿಯಲ್ಲಿದೆ. ಸರ್ಕಾರದ ಹಂತದಲ್ಲಿ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರು ಮುಖ್ಯಸ್ಥರಾಗಿದ್ದಾರೆ. ಮೀನುಗಾರಿಕೆ ಇಲಾಖೆಯ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಮೀನುಗಾರಿಕೆ ನಿರ್ದೇಶಕರ ನೇತೃತ್ವದಲ್ಲಿ ನಡೆಯುತ್ತಿವೆ. ಮೀನುಗಾರಿಕೆ ನಿರ್ದೇಶಕರ ಸಹಾಯಕ್ಕಾಗಿ ನಿರ್ದೇಶನಾಲಯದಲ್ಲಿ ಇಬ್ಬರು ಮೀನುಗಾರಿಕೆ ಅಪರ ನಿರ್ದೇಶಕರು, ಓರ್ವ ಮೀನುಗಾರಿಕೆ ಜಂಟಿ ನಿರ್ದೇಶಕರು, 6 ಮೀನುಗಾರಿಕೆ ಉಪ ನಿರ್ದೇಶಕರು (ತಾಂತ್ರಿಕ ಮತ್ತು ಆಡಳಿತ) ಹಾಗೂ 7 ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. 8 ಪ್ರಾಂತೀಯ ಜಂಟಿ ನಿರ್ದೇಶಕರು, 30 ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳು ಹಾಗೂ 136 ತಾಲ್ಲೂಕು ಮಟ್ಟದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಒಟ್ಟು 1419 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, 657 ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿದ್ದು 762 ಹುದ್ದೆಗಳು ಖಾಲಿ ಇವೆ.

**2. 2022–23 ರ ವಾರ್ಷಿಕ ಯೋಜನೆ:**

2022–23ನೇ ಸಾಲಿನಲ್ಲಿ ಒಟ್ಟು ರೂ.21834.00 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ. ಕೆಲವು ಯೋಜನೆಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೆಚ್ಚುವರಿ ಅನುದಾನ ರೂ.11531.17ಲಕ್ಷಗಳನ್ನು ನೀಡಲಾಗಿದೆ. ಹೀಗೆ ಮೀನುಗಾರಿಕೆ ಇಲಾಖೆಗೆ 2022–23 ನೇ ಸಾಲಿನಲ್ಲಿ ಒಟ್ಟು ರೂ.33287.23 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ವಿವರಗಳನ್ನು ಕೆಳಗಿನಂತೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

| ವಿವರ | ಅಂದಾಜು ಆಯವ್ಯಯ | ರಾಜ್ಯದ ಪಾಲು | ಕೇಂದ್ರದ ಪಾಲು | ಒಟ್ಟು |
|---|---|---|---|---|
| **ರಾಜ್ಯ ವಲಯ ಯೋಜನೆಗಳು** | | | | |
| ಅ) 2405–ಮೀನುಗಾರಿಕೆ | 11343.65 | 9800.88 | 3831.00 | 13631.88 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 5700.00 | 7988.00 | 2905.00 | 10893.00 |
| ಇ) 2202–General Education | 0 | 3972.00 | 0 | 3972.00 |
| **ಒಟ್ಟು ರಾಜ್ಯ ವಲಯ** | 17043.65 | 21760.88 | 6736.00 | 28496.88 |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | | |
| ಅ) 2405–ಮೀನುಗಾರಿಕೆ | 4790.35 | 4790.35 | 0.00 | 4790.35 |
| **ಒಟ್ಟು** | 21834.00 | 26551.23 | 6736.00 | 33287.23 |

ಹೆಚ್ಚುವರಿ ಅನುದಾನ ಪಡೆದ ಯೋಜನೆಗಳ ವಿವರಗಳು ಕೆಳಗಿನಂತೆ ನೀಡಲಾಗಿದೆ.

| ಕ್ರ.ಸಂ | ಯೋಜನೆ | ಹೆಚ್ಚುವರಿ ಅನುದಾನ (ರೂ.ಲಕ್ಷ) |
|---|---|---|
| 1. | ಕೇಂದ್ರ ಪುರಸ್ಕೃತ ಯೋಜನೆ ನೀಲಿ ಕ್ರಾಂತಿ – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ | 405.14 |
| 2. | ಮೀನುಗಾರಿಕೆ ಬಂದರುಗಳ ನಿರ್ಮಾಣ– ಬಂಡವಾಳ– ಕೇಂದ್ರದ ಪಾಲು | 1905.00 |
| 3. | ಮೀನುಗಾರಿಕೆ ಬಂದರುಗಳ ನಿರ್ಮಾಣ– ಬಂಡವಾಳ– ರಾಜ್ಯದ ಪಾಲು | 3288.00 |
| 4 | ದೋಣಿಗಳಿಗೆ ಸೀಮೆ ಎಣ್ಣೆ ಸರಬರಾಜು | 1842.00 |
| 5 | ನಿರ್ದೇಶನ ಮತ್ತು ಆಡಳಿತ | 119.03 |
| 6 | ವಿದ್ಯಾನಿಧಿ ಯೋಜನೆ | 3972.00 |
| | **ಒಟ್ಟು** | **11531.17** |

**2022–23 ನೇ ಸಾಲಿನ ಆರ್ಥಿಕ ಪ್ರಗತಿಯ ಸಂಕ್ಷಿಪ್ತ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.**

**ಆರ್ಥಿಕ ಪ್ರಗತಿ:** (ರೂ.ಲಕ್ಷಗಳಲ್ಲಿ)

| ವಿವರ | ಅನುದಾನ | ಬಿಡುಗಡೆ | ವೆಚ್ಚ |
|---|---|---|---|
| **ರಾಜ್ಯ ವಲಯ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 13631.88 | 13877.85 | 13690.82 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 10893.00 | 10743.00 | 10740.12 |
| ಇ) 2202–General Education | 3972.00 | 500.00 | 1.24 |
| **ಒಟ್ಟು ರಾಜ್ಯ ವಲಯ** | **28496.88** | **25120.85** | **24432.18** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | |
| ಅ) 2405–ಮೀನುಗಾರಿಕೆ | 4790.35 | 4851.23 | 4406.32 |
| **ಒಟ್ಟು** | **33287.23** | **29972.08** | **28838.50** |

**ಭೌತಿಕ ಪ್ರಗತಿ**

| ಮೀನು ಉತ್ಪಾದನೆ | **ಘಟಕ** | **ಗುರಿ** | **ಸಾಧನೆ** |
|---|---|---|---|
| ಒಳನಾಡು | ಲಕ್ಷ ಮೆ.ಟನ್ | 4.24 | 4.94 |
| ಕರಾವಳಿ | ಲಕ್ಷ ಮೆ.ಟನ್ | 6.48 | 7.30 |
| **ಒಟ್ಟು** | ಲಕ್ಷ ಮೆ.ಟನ್ | 10.72 | 12.24 |
| ಮೀನು ಮರಿ ಉತ್ಪಾದನೆ (ಫ್ರೈ) | ಲಕ್ಷಗಳಲ್ಲಿ | 11251.00 | 7759.00 |

**3. ಸಮುದ್ರ ಮೀನುಗಾರಿಕೆ**

**3.1 ಮೀನುಗಾರಿಕೆ ದೋಣಿಗಳಿಗೆ ಡೀಸೆಲ್–ಮಾರಾಟ ತೆರಿಗೆ ಮರುಪಾವತಿ (2405–00–103–0–23)**

2022–23 ನೇ ಸಾಲಿನಲ್ಲಿ ಈ ಯೋಜನೆಯಡಿ 175000 ಕಿಲೋ ಲೀಟರ್ ರಾಜ್ಯ ಮಾರಾಟ ಕರರಹಿತ ಡೀಸೆಲ್ ನಿಗದಿಯಾಗಿದ್ದು, ಈ ಪೈಕಿ 174709 ಕಿಲೋ ಲೀಟರ್ ಕರಾವಳಿ ಜಿಲ್ಲೆಗಳ 3456 ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಬಂಕ್‌ಗಳ ಮೂಲಕ ವಿತರಿಸಲಾಗಿದೆ ಹಾಗೂ ಈ ಸಾಲಿಗೆ ಯಾವುದೇ ಅನುದಾನ ನಿಗದಿಯಾಗಿರುವುದಿಲ್ಲ.

ಜಿಲ್ಲಾವಾರು ಡೀಸೆಲ್ ವಿತರಣೆಯ ವಿವರ ಈ ಕೆಳಕಂಡಂತಿರುತ್ತದೆ.

| **ಜಿಲ್ಲೆ** | **ದೋಣಿಗಳ ಸಂಖ್ಯೆ** | **ಜಿಲ್ಲೆಗಳಿಗೆ ಹಂಚಿಕೆಯಾದ ಡೀಸೆಲ್ ಪ್ರಮಾಣ (ಲಕ್ಷ ಲೀ.ಗಳಲ್ಲಿ)** | **ಬಂಕ್‌ಗಳಿಂದ ವಿತರಿಸಲಾದ ಡೀಸೆಲ್ ಪ್ರಮಾಣ (ಲಕ್ಷ ಲೀ.ಗಳಲ್ಲಿ)** |
|---|---|---|---|
| ಉಡುಪಿ | 1740 | 92550 | 92547 |
| ಉತ್ತರ ಕನ್ನಡ | 583 | 10650 | 10368 |
| ದಕ್ಷಿಣ ಕನ್ನಡ | 1133 | 71800 | 71794 |
| **ಒಟ್ಟು** | **3456** | **175000** | **174709** |

**3.2 ಸಾಂಪ್ರದಾಯಿಕ ದೋಣಿಗಳಿಗೆ ಸೀಮೆ ಎಣ್ಣೆ ಸರಬರಾಜು: (2405–00–103–0–17)**

ಕರ್ನಾಟಕದ ಕರಾವಳಿಯಲ್ಲಿ ಹೆಚ್ಚಿನ ಸಂಖ್ಯೆಯ ಸಾಂಪ್ರದಾಯಿಕ ದೋಣಿಗಳು ಮೀನುಗಾರಿಕೆಯಲ್ಲಿ ತೊಡಗಿದ್ದು, ಈ ನಾಡ ದೋಣಿಗಳು ಔಟ್‌ಬೋರ್ಡ್ ಇಂಜಿನ್‌ಗಳನ್ನು ಅಳವಡಿಸಿಕೊಂಡು ಸಮುದ್ರ ತೀರದಿಂದ ಕಡಿಮೆ ಅವಧಿಯಲ್ಲಿ ಮೀನು ಹಿಡಿಯುವ ಸ್ಥಳಕ್ಕೆ ಹೋಗಿ ಮೀನುಗಾರಿಕೆ ಮಾಡಿ ಮೀನು ಇಳಿದಾಣ ಕೇಂದ್ರಕ್ಕೆ ಹಿಂದಿರುಗಲು ಅನುಕೂಲವಾಗಿದೆ. ಈ ಮೋಟಾರೀಕೃತ ದೋಣಿಗಳಿಗೆ ಬಹು ವರ್ಷಗಳಿಂದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆವತಿಯಿಂದ ಪಡಿತರ ದರದಲ್ಲಿ ಮಾಹೆಯಾನ ತಲಾ 300 ಲೀಟರ್ ಸೀಮೆ ಎಣ್ಣೆಯನ್ನು ಪ್ರತಿ ದೋಣಿಗೆ ಪೂರೈಸಲಾಗುತ್ತಿತ್ತು. ಆದರೆ 2018–19 ನೇ ಸಾಲಿನಿಂದ ಮೀನುಗಾರಿಕೆ ಇಲಾಖೆಯಡಿ ಈ ಯೋಜನೆಗೆ ಅನುದಾನ ಒದಗಿಸಲಾಗುತ್ತಿದೆ. ಈ ಸಾಂಪ್ರದಾಯಿಕ ದೋಣಿಗಳಿಗೆ ಪಡಿತರ ದರದಲ್ಲಿ ಪ್ರತಿ ಮಾಹೆ 300 ಲೀಟರ್ ಸೀಮೆ ಎಣ್ಣೆಯನ್ನು ಪ್ರತಿ ಬೋಟಿಗೆ ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ. ಭಾರತ ಸರ್ಕಾರದಿಂದ ಬಿಡುಗಡೆಯಾದ ಸೀಮೆಎಣ್ಣೆಯನ್ನು ಜೂನ್ 2022 ರವರೆಗೆ 4514 ಯಾಂತ್ರಿಕೃತ ದೋಣಿಗಳು ಬಳಸಿಕೊಂಡಿವೆ. ಸರ್ಕಾರದ ಆದೇಶದಂತೆ 8030 ದೋಣಿಗಳಿಗೆ ತಿಂಗಳಿಗೆ @300 ಲೀಟರ್ ಸೀಮೆಎಣ್ಣೆ ಒದಗಿಸಲಾಗಿದೆ. 2022-23 ರಲ್ಲಿ ರೂ.173.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಸೀಮೆಎಣ್ಣೆಯ ಬೆಲೆ ಹೆಚ್ಚಳದ ಕಾರಣ, SE–2 ರ ಅಡಿಯಲ್ಲಿ ರೂ.1842.00 ಲಕ್ಷವನ್ನು ಬಿಡುಗಡೆ ಮಾಡಲಾಗಿದೆ. ಆದ್ದರಿಂದ ಈ ಯೋಜನೆಗೆ ಒಟ್ಟು ರೂ.2015.00 ಲಕ್ಷವನ್ನು ನಿಗದಿಪಡಿಸಲಾಗಿರುತ್ತದೆ.

**3.3 ಮೀನುಗಾರಿಕೆ ಬಂದರುಗಳು – ಕೇಂದ್ರ ಪುರಸ್ಕೃತ ಯೋಜನೆ (4405–00–103–6–01) ಹಾಗೂ (4405–00–103–6–02):**

2019–20ನೇ ಸಾಲಿನಲ್ಲಿ ಅಳ್ವೆಕೋಡಿ–ತೆಂಗಿನಗುಂಡಿ ಇಳಿದಾಣ ಕೇಂದ್ರದ ಅಲೆತಡೆಗೋಡೆ ನಿರ್ಮಾಣವನ್ನು ರೂ.86.08 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ರಾಜ್ಯ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಮುಂದುವರೆದು, ಸದರಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು 50:50 ಅನುಪಾತದಲ್ಲಿ ನೆರವು ನೀಡಲು ಕೇಂದ್ರ ಸರ್ಕಾರದ ಯೋಜನಾ ಮಂಜೂರಾತಿ ಸಮಿತಿಯಲ್ಲಿ ಸಹಮತಿ ನೀಡಲಾಗಿದೆ. 2022–23ರಲ್ಲಿ ರೂ. ಈ ಯೋಜನೆಗೆ 20.00 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆಗಾಗಿ ಭಾರತ ಸರ್ಕಾರದಿಂದ ರೂ.10.00 ಕೋಟಿಯನ್ನು ಬಿಡುಗಡೆ ಮಾಡಿದ್ದು, ಇದಕ್ಕೆ ಅನುಗುಣವಾದ ರಾಜ್ಯದ ಪಾಲು ರೂ.10.00 ಕೋಟಿಗಳ ಬಿಡುಗಡೆಯಾಗಿರುತ್ತದೆ.

2022–23ರಲ್ಲಿ ಹೆಜಮಾಡಿ ಕೋಡಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ ಕಾಮಗಾರಿಯ ಅಂದಾಜು ವೆಚ್ಚವನ್ನು 188.73 ಕೋಟಿಗಳಿಗೆ ಪರಿಷ್ಕರಿಸಲಾಗಿದೆ. ಇದರಲ್ಲಿ ಕೇಂದ್ರ ಪಾಲು ರೂ. 69.30 ಕೋಟಿ ಮತ್ತು ರಾಜ್ಯದ ಪಾಲು ರೂ. 119.43 ಕೋಟಿಯಾಗಿದೆ. 2022–23ರಲ್ಲಿ ಕೇಂದ್ರ ಪಾಲು ರೂ. 13.86 ಕೋಟಿ ಬಿಡುಗಡೆ ಮಾಡಲಾಗಿದ್ದು, ರಾಜ್ಯದ ಪಾಲು ರೂ. 32.88 ಕೋಟಿ ಬಿಡುಗಡೆಯಾಗಿರುತ್ತದೆ.

2022–23ನೇ ಸಾಲಿನಲ್ಲಿ 2000.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದೆ ಮತ್ತು ಹೆಚ್ಚುವರಿ ಹಂಚಿಕೆ ನಂತರ ರೂ. 5193.00 ಲಕ್ಷ ಬಿಡುಗಡೆ ಮಾಡಲಾಗಿದ್ದು, ಈ ಕೆಳಕಂಡ ಕಾಮಗಾರಿಗಳಿಗೆ ಸದರಿ ವರ್ಷದಲ್ಲಿ ರೂ.7193.00 ಲಕ್ಷಗಳನ್ನು ಬಳಸಿಕೊಳ್ಳಲಾಗಿದೆ.

| ಕ್ರ.ಸಂ | ಕಾಮಗಾರಿಗಳ ವಿವರ | ಮಂಜೂರಾದ ಮೊತ್ತ | 2022–23ನೇ ಸಾಲಿನ ವೆಚ್ಚ | ಸಂಚಿತ ವೆಚ್ಚ |
|---|---|---|---|---|
| 1. | ಅಳ್ವೇಕೋಡಿ–ತೆಂಗಿನಗುಂಡಿ ಬ್ರೇಕ್ ವಾಟರ್ ನಿರ್ಮಾಣ (50:50::ಕೇ:ರಾ) | 8608.00 | 2000.00 | 5068.34 |
| 2. | ಹೆಜಮಾಡಿಕೋಡಿಯಲ್ಲಿ ಮೀನುಗಾರಿಕೆ ಬಂದರಿನ ನಿರ್ಮಾಣ | 18873.00 | 4674.00 | 4886.51 |
| 3. | ಮಂಗಳೂರಿನಲ್ಲಿ 3 ನೇ ಹಂತದ ಮೀನುಗಾರಿಕೆ ಬಂದರಿನ ನಿರ್ಮಾಣ | 5760.00 | 519.00 | 5717.62 |
| | ಒಟ್ಟು | **33241.00** | **7193.00** | **15672.47** |

**3.4 ಮೀನುಗಾರಿಕೆ ಇಳಿದಾಣ ಮತ್ತು ತಂಗುದಾಣಗಳು (4405–00–104–0–02–386–ನಿರ್ಮಾಣ):**

- 2014–15 ನೇ ಸಾಲಿನಲ್ಲಿ ರೂ. 3300.00 ಲಕ್ಷಗಳ ವೆಚ್ಚದಲ್ಲಿ ಮಂಜೂರಾದ ಕೊಡೇರಿಯಲ್ಲಿ ಬ್ರೇಕ್ ವಾಟರ್ ನಿರ್ಮಾಣ ಕಾಮಗಾರಿಯನ್ನು ಮಂಜೂರಾದ ಮುಂದುವರಿಸಲಾಗಿದೆ. 2022–23ರಲ್ಲಿ ಮೇಲ್ಕಂಡ ಕಾಮಗಾರಿಗೆ ರೂ. 479.68 ಲಕ್ಷಗಳನ್ನು ಬಳಸಿಕೊಳ್ಳಲಾಗಿದೆ. ಈ ಕಾಮಗಾರಿಗೆ ಒಟ್ಟು ರೂ. 2973.68 ಲಕ್ಷ ವೆಚ್ಚ ಮಾಡಲಾಗಿದೆ.
- 05 ಪ್ರಮುಖ ಮೀನುಗಾರಿಕಾ ಬಂದರುಗಳಲ್ಲಿ ಹೂಳೆತ್ತಲು ರೂ. 2000.00 ಲಕ್ಷಗಳನ್ನು ಮೀಸಲಿಡಲಾಗಿದೆ.
- ಅಧ್ಯಯನಗಳನ್ನು ಹೊರತುಪಡಿಸಿ ರಾಜ್ಯದ ವಿವಿಧ ಬಂದರುಗಳು ಮತ್ತು ಇಳಿದಾಣ ಕೇಂದ್ರಗಳಲ್ಲಿ ಸಣ್ಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಈ ಯೋಜನೆಯಡಿ ರೂ.3500.00 ಲಕ್ಷ ಬಿಡುಗಡೆ ಮಾಡಲಾಯಿತು. ರೂ. 3500.00 ಲಕ್ಷಗಳನ್ನು ಈ ಕೆಳಗಿನ ಕಾಮಗಾರಿಗಳಿಗೆ ಬಳಸಿಕೊಳ್ಳಲಾಗಿದೆ.

| ಕ್ರ.ಸಂ | ವಿವರ | ಮೊತ್ತ | 2022–23 | ವೆಚ್ಚ |
|---|---|---|---|---|

| | | | | |
|---|---|---|---|---|
| 1. | 05 ಪ್ರಮುಖ ಮೀನುಗಾರಿಕಾ ಬಂದರುಗಳಲ್ಲಿ ಹೂಳೆತ್ತಲು ಕೆ.ಎಂ.ಬಿ.ಯಲ್ಲಿ ಠೇವಣಿ ಇಡಲಾಗಿದೆ. | 2000.00 | 1683.61 | 1683.61 |
| 2. | ಕೊಡೇರಿಯಲ್ಲಿ ಬ್ರೇಕ್ ವಾಟರ್ ನಿರ್ಮಾಣ (2ನೇ ಹಂತ) | 3300.00 | 479.68 | 2973.68 |
| 3. | ಗಂಗೊಳ್ಳಿ ಮೀನುಗಾರಿಕಾ ಬಂದರಿನ ಪುನರ್ನಿರ್ಮಾಣ (ಡಯಾಫ್ರಾಮ್ ಗೋಡೆ) | 1200.00 | 252.76 | 1123.39 |
| 4. | ಕೊಡೇರಿ ಮೀನುಗಾರಿಕಾ ಬಂದರಿನಲ್ಲಿ ನ್ಯಾವಿಗೇಷನ್ ಚಾನೆಲ್ ಉದ್ದಕ್ಕೂ ನದಿ ದಡದ ರಕ್ಷಣೆ ಕಾರ್ಯವನ್ನು ಒದಗಿಸುವುದು | 280.00 | 97.76 | 289.53 |
| 5. | ಉಡುಪಿ ಜಿಲ್ಲೆ, ಕೊಡೇರಿ ಮೀನುಗಾರಿಕೆ ಬಂದರಿನಲ್ಲಿ ಜೆಟ್ಟಿ ನಿರ್ಮಾಣ | 200.00 | 167.97 | 167.97 |
| 6 | ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಮರವಂತೆಯಲ್ಲಿ ಕೇರಳ ಮಾದರಿ ಮೀನುಗಾರಿಕೆ ಬಂದರು ನಿರ್ಮಾಣ (ವರ್ಕ್ ಸ್ಲಿಪ್ ಮತ್ತು ಇಐಆರ್‌ಎಲ್ ನಿಂದ ಹೆಚ್ಚುವರಿ) | 4500.00 | 101.72 | 4714.33 |
| 7 | ಕೊಡೇರಿ ಮೀನುಗಾರಿಕೆ ಬಂದರಿನಲ್ಲಿ ಹರಾಜು ಪ್ರಾಂಗಣ, ಸಾರ್ವಜನಿಕ ಶೌಚಾಲಯ ಮತ್ತು ಸಂಪರ್ಕ ರಸ್ತೆ ನಿರ್ಮಾಣ | 249.00 | 131.90 | 131.90 |
| 8 | ಉತ್ತರ ಕನ್ನಡ ಜಿಲ್ಲೆ, ಕುಮಟಾ ತಾಲ್ಲೂಕು ತದಡಿ ಮೀನುಗಾರಿಕೆ ಬಂದರಿನಲ್ಲಿ ನೆಟ್ ಮೆಂಡಿಂಗ್ ಶೆಡ್ ನಿರ್ಮಾಣ | 45.00 | 39.53 | 39.53 |
| 9. | ಉಡುಪಿ ವಿಭಾಗದ ಅಡಿಯಲ್ಲಿ ರಾಜ್ಯದ ಮೀನುಗಾರಿಕಾ ಬಂದರುಗಳಲ್ಲಿ ವಿವಿಧ ಕಾಮಗಾರಿಗಳು | 700.00 | 454.06 | 454.06 |
| 10 | ಕಾರವಾರ ವಿಭಾಗದ ಅಡಿಯಲ್ಲಿ ರಾಜ್ಯದ ಮೀನುಗಾರಿಕಾ ಬಂದರುಗಳಲ್ಲಿ ವಿವಿಧ ಕಾಮಗಾರಿಗಳು | 200.00 | 91.01 | 91.01 |
| | **ಒಟ್ಟು** | **12674.00** | **3500.00** | **11669.01** |

### 3.5 ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ ಯೋಜನೆ (4405-00-800-2-03):

2022-23 ನೇ ಸಾಲಿನಲ್ಲಿ 200.00 ಲಕ್ಷಗಳ ಅನುದಾನ ಮೀಸಲಿಡಲಾಗಿತ್ತು. ನಂತರ ರೂ.125.00 ಲಕ್ಷಗಳನ್ನು ಹಿಂಪಡೆಯಲಾಗಿದೆ. ನಬಾರ್ಡ್ ನೆರವಿನ ಆರ್‌ಐಡಿಎಫ್ ಯೋಜನೆಯಡಿ ಆರ್‌ಐಡಿಎಫ್ ಟ್ರ್ಯಾಂಚ್ 22ರ ಅಡಿಯಲ್ಲಿ ಅನುಮೋದಿಸಲಾದ ಒಂದು ಕಾಮಗಾರಿಗೆ ರೂ.47.52 ಲಕ್ಷ ವೆಚ್ಚ ಮಾಡಲಾಗಿದೆ. ಕಾಮಗಾರಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ:

| ಟ್ರ್ಯಾಂಚ್ | **ಮುಂದುವರಿದ ಕಾಮಗಾರಿಗಳು** | **ಯೋಜನಾ ವೆಚ್ಚ** | **ಬಳಕೆ (ರೂ.ಲಕ್ಷಗಳಲ್ಲಿ)** |
|---|---|---|---|
| 22 | ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಶುಚಿಯಾದ ಮೀನು ಮಾರುಕಟ್ಟೆ ನಿರ್ಮಾಣ. | 240.00 | 47.52 |

### 3.6 ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್‌ಚಕ್ತಿಗೆ ಸಹಾಯಧನ (2405-00-110-0-03)

ಈ ಯೋಜನೆಯಡಿ ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸಿದ ಪ್ರತೀ ಯೂನಿಟ್‌ವಿದ್ಯುತ್‌ಗೆ ರೂ.1.75 ರಂತೆ ಪ್ರತಿ ಘಟಕಕ್ಕೆ ಗರಿಷ್ಟ ರೂ.3.50 ಲಕ್ಷ ಸಹಾಯಧನ ನೀಡಲು ಅವಕಾಶವಿರುತ್ತದೆ.

2022-23 ನೇ ಸಾಲಿನಲ್ಲಿ ರೂ.400.00 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.400.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯದ 182 ಐಸ್ ಪ್ಲಾಂಟ್ ಹಾಗೂ ಕೋಲ್ಡ್ ಸ್ಟೋರೇಜ್‌ಗಳಿಗೆ ಸಹಾಯಧನ ವಿತರಿಸಲು ರೂ.400.00 ಲಕ್ಷಗಳನ್ನು ವಿತರಿಸಲಾಗಿದೆ.

### 3.7 ಕರಾವಳಿ ಕೊಂಡಿ ರಸ್ತೆಗಳ ನಿರ್ವಹಣೆ (2405-00-337-0-01)

ರಾಜ್ಯದ ಮೂರು ಕರಾವಳಿ ಜಿಲ್ಲೆಗಳಲ್ಲಿ ಒಟ್ಟು 369.31 ಕಿಮೀ ಉದ್ದದ 228 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಸದರಿ ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿ, ಅಭಿವೃದ್ಧಿ ಮತ್ತು ನಿರ್ವಹಣೆಗೆ 2022-23 ರಲ್ಲಿ ಯಾವುದೇ ಅನುದಾನ ಬಿಡುಗಡೆ ಆಗಿರುವುದಿಲ್ಲ.

### 4.0. ಒಳನಾಡು ಮೀನುಗಾರಿಕೆ:

2022-23 ರಲ್ಲಿ ಇಲಾಖೆಯ ಮೀನುಮರಿ ಉತ್ಪಾದನಾ ಕೇಂದ್ರಗಳಲ್ಲಿ 7759.00 ಲಕ್ಷ ಮೀನುಮರಿಗಳನ್ನು ಉತ್ಪಾದಿಸಲಾಗಿದೆ. 3201 ಇಲಾಖಾ ಕೆರೆಗಳಿಗೆ 2716.53 ಲಕ್ಷ ಬಲಿತ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ. ಹಾಗೆಯೇ 6145 ಗ್ರಾಮ ಪಂಚಾಯತ್ ಕೆರೆಗಳಿಗೆ 992.91 ಲಕ್ಷ ಬಲಿತ ಮೀನುಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿಪಡಿಸಲಾಗಿದೆ. ಅಂದಾಜು 4.94 ಲಕ್ಷ ಮೆ.ಟನ್ ಮೀನು ಉತ್ಪಾದಿಸಲಾಗಿದೆ.

### 4.1 ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ (2405-00-101-0-03):

ರಾಜ್ಯದಲ್ಲಿ ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆಯಡಿ ಇರುವ ಹಲವಾರು ಉಪಯೋಜನೆಗಳಡಿ ಸಾಧಿಸಿರುವ ಪ್ರಗತಿಯನ್ನು ಈ ಕೆಳಕಾಣಿಸಿದೆ.

ಈ ಯೋಜನೆಯಡಿ ನೀಡಲಾಗಿರುವ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ಫಾರಂಗಳಲ್ಲಿ ಹಾಗೂ ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಮೀನುಮರಿ ಪಾಲನೆಗೆ ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನು ಮರಿ ಸಾಗಾಣಿಕೆ ವಾಹನಗಳ ಖರೀದಿ, ಮೀನು ಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚಗಳಿಗೆ ವಿನಿಯೋಗಿಸಲಾಗುತ್ತಿದೆ.

- ಈ ಯೋಜನೆಯಡಿ ಮೀನುಮರಿ ಬೆಲೆಯ ಶೇ.50ರಷ್ಟು ಅಂದರೆ ವೈಯಕ್ತಿಕವಾಗಿ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/-ಗಳ ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು. ಮೀನುಗಾರಿಕೆ ಇಲಾಖೆಯಲ್ಲಿ ನೋಂದಾಯಿಸಿರುವ ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಆಸಕ್ತರಿರುವ ಮೀನು ಕೃಷಿಕರು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50ರಷ್ಟು ಗರಿಷ್ಠ ರೂ.25,000ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸದರಿ ಯೋಜನೆಯಡಿ ರೂ.20.00 ಲಕ್ಷ ಸಹಾಯಧನವನ್ನು 320 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

- "ಸಿಗಡಿ ಮತ್ತು ಹಿನ್ನೀರು ಮೀನು ಕೃಷಿ" ಹೊಸ ಯೋಜನೆಯಡಿ ಸಿಗಡಿ ಮತ್ತು ಮೀನು ಸಾಕಾಣಿಕೆ ಮತ್ತು ಹಿನ್ನೀರು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತೀ ಹೆಕ್ಟೇರ್ ಘಟಕ ವೆಚ್ಚ ರೂ.1.00 ಲಕ್ಷಕ್ಕೆ ಶೇ.50ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.

•ಕೆರೆಗಳ/ಜಲಾಶಯಗಳ ಪಕ್ಕದಲ್ಲಿ ಕೊಳ ನಿರ್ಮಿಸಿ ಮೀನುಮರಿಗಳನ್ನು ಪಾಲನೆ ಮಾಡಲು ಗರಿಷ್ಟ ರೂ.2.50ಲಕ್ಷ (ಶೇ.100)ರಂತೆ ಸಹಾಯಧನ ನೀಡಲು ಯೋಜನೆಯನ್ನು ರೂಪಿಸಲಾಗಿದ್ದು, 2022-23 ನೇ ಸಾಲಿನಲ್ಲಿ 10.00 ಹೆ ಕೊಳಗಳಲ್ಲಿ ಮೀನುಮರಿಗಳನ್ನು ಪಾಲನೆ ಮಾಡಲು ಒಟ್ಟು ರೂ.25.00 ಲಕ್ಷ ಸಹಾಯಧನ ನೀಡಲಾಗಿದೆ.

•2022-23 ನೇ ಸಾಲಿನಲ್ಲಿ, ರಾಜ್ಯದ ಗ್ರಾಮ ಪಂಚಾಯತ್ ಕೆರೆಗಳಲ್ಲಿ ಮೀನು ಮರಿಗಳನ್ನು ದಾಸ್ತಾನು ಮಾಡುವ ಮೂಲಕ ಒಳನಾಡು ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸಲು ಹೊಸ ಯೋಜನೆಯನ್ನು ಘೋಷಿಸಲಾಯಿತು. ಅದರಂತೆ 5927 ಗ್ರಾಮ ಪಂಚಾಯತಿ ಕೆರೆಗಳಲ್ಲಿ 3.16 ಕೋಟಿ ಫಿಂಗರ್‌ಲಿಂಗ್‌ಗಳನ್ನು ರೂ. 426.00 ಲಕ್ಷ ಅನುದಾನದಲ್ಲಿ ದಾಸ್ತಾನು ಮಾಡಲಾಗಿದೆ.

2022-23 ನೇ ಸಾಲಿನಲ್ಲಿ ರೂ.970.00 ಲಕ್ಷಗಳ ಅನುದಾನ ಹಂಚಿಕೆ ಮಾಡಲಾಗಿದೆ. ಬಿಡುಗಡೆಯಾದ ಮೊತ್ತ ರೂ. 920.00 ಲಕ್ಷಗಳಲ್ಲಿ , ರೂ.919.00 ಲಕ್ಷ ಗಳನ್ನು ಮೇಲಿನ ಉಪ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಳಸಲಾಗಿದೆ. ರೂ. 50.00 ಲಕ್ಷವನ್ನು "ನಿರ್ದೇಶನ ಮತ್ತು ಆಡಳಿತ" (051) ಯೋಜನೆಗೆ ಪುನರ್ ವಿನಿಯೋಗಿಸಲಾಗಿದೆ.

### 4.2 ಜಲಾಶಯದಲ್ಲಿ ಮೀನು ಮರಿ ಬಿತ್ತನೆ (2405-00-101-0-54)

ರಾಜ್ಯದಲ್ಲಿ 2.72 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣವುಳ್ಳ ಒಟ್ಟು 82 ಜಲಾಶಯಗಳಿವೆ. ಸಾವಿರಾರು ಮೀನುಗಾರರ ಕುಟುಂಬಗಳು ಅವರ ಜೀವನೋಪಾಯಕ್ಕಾಗಿ ಜಲಾಶಯಗಳನ್ನು ಅವಲಂಬಿಸಿವೆ. ಇತ್ತೀಚಿನ ದಿನಗಳಲ್ಲಿ ನದಿಗಳಲ್ಲಿ ಮತ್ತು ಹಲವಾರು ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲಗಳು ಕ್ಷೀಣಿಸಿದ್ದು ಹೆಚ್ಚಿನ ಮೀನು ಹಿಡುವಳಿ ಮಾಡಲು ಕೊರತೆಯಾಗಿರುವುದರಿಂದ, ಇದನ್ನೇ ಅವಲಂಬಿಸಿರುವ ಮೀನುಗಾರರು ಸಂಕಷ್ಟಕ್ಕೊಳಗಾಗಿದ್ದಾರೆ. ಶೀಘ್ರವಾಗಿ ಬೆಳೆಯುವ ಗೆಂಡೆ ಮೀನುಗಳಾದ ಕಟ್ಲಾ, ರೋಹು, ಮೃಗಾಲ್ ತಳಿಗಳು ಜಲಾಶಯಗಳಲ್ಲಿ ಸ್ವಾಭಾವಿಕವಾಗಿ ಮೀನುಮರಿಗಳನ್ನು ಉತ್ಪಾದಿಸದಿರುವುದರಿಂದ ಸದರಿ ತಳಿಗಳ ಮೀನುಮರಿಗಳನ್ನು ಕಾಲಕಾಲಕ್ಕೆ ದಾಸ್ತಾನು ಮಾಡುವ ಮೂಲಕ ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲವನ್ನು ವೃದ್ಧಿಗೊಳಿಸುವುದು ಅತ್ಯಗತ್ಯವಾಗಿದೆ.

ಈ ಯೋಜನೆಯಡಿ ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ಬಿತ್ತನೆ ಮಾಡಿ ಜಲಾಶಯಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತದೆ. 2022-23 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.200.00 ಲಕ್ಷಗಳನ್ನು ಒದಗಿಸಲಾಗಿದೆ. ರೂ.200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಆಯ್ದ 38 ಜಲಾಶಯಗಳಲ್ಲಿ 583.56 ಲಕ್ಷ ಬಲಿತ ಮೀನುಮರಿಗಳನ್ನು ದಾಸ್ತಾನು ಮಾಡಿ ರೂ.60.00 ಲಕ್ಷ ವೆಚ್ಚ ಮಾಡಲಾಗಿದೆ.

### 4.3 ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ (2405-00-110-0-02)

"ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ" ಎಂಬ ಯೋಜನೆಯಡಿ ಕರಾವಳಿ ಮತ್ತು ಒಳನಾಡಿನಲ್ಲಿ ಸಾಂಪ್ರದಾಯಿಕ ಮೀನುಗಾರರಿಗೆ ಮೀನು ಹಿಡುವಳಿಗೆ ಬೇಕಾದ ಬಲೆ, ಮತ್ತು ಪೂರಕ ಸಾಮಗ್ರಿಗಳನ್ನು ಕಿಟ್ ರೂಪದಲ್ಲಿ ಶೇ.100ರಷ್ಟು ಸಹಾಯಧನ ನೀಡಲಾಗುವುದು. ಸಮುದ್ರ ಮೀನುಗಾರರಿಗೆ ಒಟ್ಟು ರೂ.2,500/- ಮೌಲ್ಯದ ಲೈಫ್ ಜಾಕೆಟ್‌ಗಳನ್ನು, ಲೈಫ್‌ಬಾಯ್‌ಗಳನ್ನು, ಶಾಖನಿರೋಧಕ ಬಾಕ್ಸ್‌ಗಳನ್ನು/ಪ್ಲಾಸ್ಟಿಕ್ ಬಾಕ್ಸ್‌ಗಳನ್ನು ಮತ್ತು ಒಳನಾಡು ಮೀನುಗಾರರಿಗೆ ರೂ.10,000/- ಮೌಲ್ಯದ 2ಹುಟ್ಟುಗಳೊಂದಿಗೆ ಹರಿಗೋಲನ್ನು ಮೀನುಗಾರಿಕೆ ಬಲೆಯನ್ನು ಉಚಿತವಾಗಿ ವಿತರಿಸಲಾಗಿದೆ.

2022-23 ನೇ ಸಾಲಿನಲ್ಲಿ ಸದರಿ ಯೋಜನೆಗೆ ರೂ.125.00ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು 1250 ಫಲಾನುಭವಿಗಳಿಗೆ ಸಲಕರಣೆ ಕಿಟ್ಟುಗಳನ್ನು ವಿತರಿಸಲು ರೂ.125.00 ಲಕ್ಷ ವೆಚ್ಚ ಮಾಡಲಾಗಿದೆ.

## 5. ಮೀನುಗಾರರ ಕಲ್ಯಾಣ ಯೋಜನೆಗಳು:

### 5.1 ಸಂಕಷ್ಟ ಪರಿಹಾರ ನಿಧಿ (2405-00-103-0-15):

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಸಂಭವಿಸುವ ದೋಣಿ ಅವಘಡಗಳಲ್ಲಿ ಮೃತರಾಗುವ ಮೀನುಗಾರರ ಆವಲಂಬಿತರಿಗೆ ರೂ.6,00,000/-ಗಳ ಪರಿಹಾರ, ಶಾಶ್ವತ ಅಂಗವಿಕಲರಾದವರಿಗೆ ರೂ.3,00,000 ಗಳ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1,50,000 ಗಳ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ವೆಚ್ಚಗಳಿಗೆ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1,00,000/- ನೆರವು ನೀಡಲು ಅವಕಾಶವಿದೆ.

### 5.2 ಸಾಮೂಹಿಕ ಅಪಘಾತ ವಿಮಾ ಯೋಜನೆ (2405-00-120-0-07-106):

ಈ ಕೇಂದ್ರ ಪುರಸ್ಕೃತ ಅಪಘಾತ ವಿಮಾ ಯೋಜನೆಯಡಿ, ಮೀನುಗಾರರು ಹಾಗೂ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ನೇರವಾಗಿ ತೊಡಗಿಸಿಕೊಂಡಿರುವ ಇತರೆ ವರ್ಗದ ಮೀನುಗಾರರು ಸಾಮೂಹಿಕ ಅಪಘಾತ ವಿಮೆಯ ಪ್ರಯೋಜನ ಪಡೆಯಬಹುದು. ಸದರಿ ಯೋಜನೆಯಡಿ 18 ರಿಂದ 70 ವರ್ಷ ವಯಸ್ಸಿನ ಪುರುಷರು ಅಥವಾ ಮಹಿಳಾ ಮೀನುಗಾರರು ಈ ಕೆಳಗಿನಂತೆ ವಿಮಾ ರಕ್ಷಣೆಗೆ ಅರ್ಹರಾಗಿರುತ್ತಾರೆ:

1. ಮರಣ ಅಥವಾ ಶಾಶ್ವತ ಸಂಪೂರ್ಣ ಅಂಗವೈಕಲ್ಯ ಹೊಂದಿದ ಮೀನುಗಾರರಿಗೆ ರೂ.6.00 ಲಕ್ಷ.
2. ಶಾಶ್ವತ ಭಾಗಶಃ ಅಂಗವೈಕಲ್ಯ ಹೊಂದಿದ ಮೀನು ಮೀನುಗಾರರಿಗೆ ರೂ.2.50 ಲಕ್ಷ.
3. ಆಕಸ್ಮಿಕ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾದ ಮೀನುಗಾರರಿಗೆ ರೂ.25,000.

ವಿಮಾ ಯೋಜನೆಯನ್ನು ಕಾರ್ಯಗತಗೊಳಿಸಲು NFDBಯನ್ನು ನೋಡಲ್ ಏಜೆನ್ಸಿ ಎಂದು ನಿಗದಿಪಡಿಸಲಾಗಿದ್ದು, ಸದರಿ ಯೋಜನೆಯನ್ನು ಮೆ. ಓರಿಯಂಟಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ (OICL) ಮೂಲಕ ಜಾರಿಗೊಳಿಸಲಾಗಿದೆ. ಪ್ರತಿ ಮೀನುಗಾರನಿಗೆ ಸಂಪೂರ್ಣ ಪ್ರೀಮಿಯಂ ಮೊತ್ತವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳವತಿಯಿಂದ 60:40 ಅನುಪಾತದಲ್ಲಿ ಪಾವತಿಸಲಾಗುತ್ತದೆ. ಪ್ರೀಮಿಯಂ ಮೊತ್ತ ಪ್ರತೀ ಮೀನುಗಾರನಿಗೆ ಪ್ರತೀ ವರ್ಷ ರೂ.72.44 ಗಳಾಗಿರುತ್ತದೆ. ರೂ.78,983 ನೋಂದಾಯಿತ ಮೀನುಗಾರರ ವಿಮೆಯನ್ನು ಸರಿದೂಗಿಸಲು NFDBಗೆ ರೂ 22.88 ಲಕ್ಷ ರೂಪಾಯಿಗಳನ್ನು ಪಾವತಿಸಲಾಗಿದೆ.

### 5.3 ವಿದ್ಯಾನಿಧಿ ಯೋಜನೆ (2202-00-120-0-07-100)

2022-23 ನೇ ಸಾಲಿನಿಂದ ಮುಖ್ಯಮಂತ್ರಿ ವಿದ್ಯಾನಿಧಿ ಕಾರ್ಯಕ್ರಮವನ್ನು ಮೀನುಗಾರರ/ಮೀನು ಕೃಷಿಕರ ಮಕ್ಕಳಿಗೂ ಸಹ ವಿಸ್ತರಿಸಲಾಗಿದ್ದು, ರಾಜ್ಯದ ಮೀನುಗಾರರ ಸುಮಾರು ಮಕ್ಕಳು ಈ ಯೋಜನೆಯ ಸದುಪಯೋಗ ಪಡೆಯಲು ಉದ್ದೇಶಿಸಲಾಗಿತ್ತು. ಇದಕ್ಕಾಗಿ ಮೀನುಗಾರಿಕೆ ಇಲಾಖೆಗೆ ರೂ.3972.00 ಲಕ್ಷಗಳನ್ನು ಮೀಸಲಿರಿಸಲಾಗಿತ್ತು. ಈ ಮೊತ್ತದಲ್ಲಿ ರೂ.500.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಆದರೆ ಈಗಾಗಲೇ ಕೃಷಿ ಇಲಾಖೆಯ ಪೂರಕ ಚಟುವಟಿಕೆಯಲ್ಲಿ ಮೀನುಗಾರಿಕೆಯು ಸೇರಿದ್ದು, ಕೃಷಿ ಇಲಾಖೆಯಡಿ ಮೀನುಗಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹವನ್ನು ನೀಡಲಾಗುತ್ತಿರುವುದರಿಂದ ಕೇವಲ ರೂ.1.24 ಲಕ್ಷ ಮಾತ್ರ ವೆಚ್ಚವಾಗರುತ್ತದೆ. ಸದರಿ ಬಿಡುಗಡೆಯಾದ ಮೊತ್ತದಲ್ಲಿ ರೂ.169.04 ಲಕ್ಷಗಳನ್ನು "ನಿರ್ದೇಶನ ಮತ್ತು ಆಡಳಿತ" (2405-00-001-0-01) ಲೆಕ್ಕ ಶೀರ್ಷಿಕೆಗೆ ಪುನರ್ ವಿನಿಯೋಗ ಮಾಡಲಾಗಿದೆ

### 5.4 ಕರಾವಳಿ ಮೀನುಗಾರರಿಗೆ ಕೇಂದ್ರ ಪುರಸ್ಕೃತ ಉಳಿತಾಯ ಮತ್ತು ಪರಿಹಾರ ಯೋಜನೆ (2405-00-120-0-07-100):

ಸದರಿ ಯೋಜನೆಯಡಿ ಮೀನುಗಾರಿಕೆ ಅವಧಿಯಲ್ಲಿ ಕರಾವಳಿ ಮೀನುಗಾರರು ರೂ.1500/-ಗಳನ್ನು ಪಾವತಿ ಮಾಡುತ್ತಿದ್ದು, ಈ ರೀತಿ ಪಾವತಿ ಮಾಡಿದ ಮೊತ್ತ ರೂ.1500/-ಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಲಾ ರೂ.1500/-ಗಳನ್ನು ನೀಡಿ, ಹೀಗೆ ಸಂಗ್ರಹಿಸಿದ ಒಟ್ಟು ರೂ.4500/-ಗಳನ್ನು ನಿಷೇಧಿತ ಮೀನುಗಾರಿಕೆ ಅವಧಿಯ (ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರ್) ತಿಂಗಳುಗಳಲ್ಲಿ ಮಾಸಿಕ ರೂ.1500/-ರಂತೆ 3 ತಿಂಗಳು ಮೀನುಗಾರರಿಗೆ ಪಾವತಿಸಲಾಗುವುದು. ಸದರಿ ಯೋಜನೆಯಡಿಯಲ್ಲಿ ರೂ.612.00 ಲಕ್ಷಗಳ ಅನುದಾನ ಕಲ್ಪಿಸಲಾಗಿರುತ್ತದೆ. ಸದರಿ ಯೋಜನೆಯಡಿ 20400 ಫಲಾನುಭವಿಗಳಿಗೆ ರೂ.612.00 ಲಕ್ಷಗಳನ್ನು ನೀಡಲಾಗಿದೆ.

**5.5 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ (2405–00–101–0–66)**

ಈ ಯೋಜನೆಯಡಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2022–23 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ಮೀನುಗಾರಿಕೆ ಸಲಕರಣೆ ಕಿಟ್ ವಿತರಣೆಗೆ ಅವಕಾಶ ಮಾಡಲಾಗಿದೆ. 2022–23 ನೇ ಸಾಲಿನಲ್ಲಿ ರೂ.1.02 ಲಕ್ಷ ಅನುದಾನ ನಿಗದಿಪಡಿಸಲಾಗಿದ್ದು, ರೂ.0.54 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ರೂ.0.39 ಲಕ್ಷವನ್ನು 4 ಫಲಾನುಭವಿಗಳಿಗೆ ಸಹಾಯಧನ ನೀಡಿ ವೆಚ್ಚ ಮಾಡಲಾಗಿದೆ.

## 6. ಇತರೆ ಯೋಜನೆಗಳು:

**6.1 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿ ಕೊಡುವುದು (2405–00–800–0–28):**

ಮೀನುಗಾರರು ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ವಾಣಿಜ್ಯ ಬ್ಯಾಂಕಿನಿಂದ ಶೇ.2 ರ ಬಡ್ಡಿ ದರದಲ್ಲಿ ರೂ.50,000/–ಗಳವರೆಗೆ ಸಾಲ ಪಡೆಯಲು ಅವಕಾಶವಿರುತ್ತದೆ. ವಾಣಿಜ್ಯ ಬ್ಯಾಂಕುಗಳು ಮೀನುಗಾರರಿಗೆ ಸಾಲ ನೀಡಿದ ಪ್ರಯುಕ್ತ ವ್ಯತ್ಯಾಸದ ಬಡ್ಡಿಯನ್ನು ತುಂಬಿಕೊಡಲು ಅವಕಾಶ ಕಲ್ಪಿಸಲಾಗಿದೆ.

2018–19ನೇ ಸಾಲಿನಿಂದ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ ರೂ.50,000/–ಗಳವರೆಗೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಾಣಿಜ್ಯ / ಗ್ರಾಮೀಣ ಪ್ರಾದೇಶಿಕ ಬ್ಯಾಂಕ್‌ಗಳಿಂದ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

2022–23 ನೇ ಸಾಲಿನಲ್ಲಿ ರೂ.50.00/–ಲಕ್ಷಗಳ ಅನುದಾನವನ್ನು ಈ ಯೋಜನೆಗೆ ಒದಗಿಸಲಾಗಿದ್ದು, 3441 ಮೀನುಗಾರರ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ರೂ.50.00 ಲಕ್ಷ ವೆಚ್ಚ ಮಾಡಲಾಗಿದೆ.

**6.2 ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ (2405–00–101–0–58)**

ಮೀನುಗಾರಿಕೆ ವಲಯದಲ್ಲಿ ಮಹತ್ತರ ಬೆಳವಣಿಗೆ ತರುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರ **ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ** ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಸದರಿ ಯೋಜನೆಯಡಿ ಮೀನುಗಾರರ ಸಾಮಾಜಿಕ, ಆರ್ಥಿಕ ಮತ್ತು ಮೀನುಗಾರಿಕೆ ವಲಯದ ಸರ್ವತೋಮುಖ ಅಭಿವೃದ್ಧಿಗಾಗಿ ಸಾಮಾನ್ಯ ಮತ್ತು ಪ.ಜಾತಿ/ಪ.ಪಂಗಡ/ಮಹಿಳಾ ವರ್ಗಗಳಿಗೆ ಸೇರಿದ ಫಲಾನುಭವಿಗಳಿಗೆ ಕ್ರಮವಾಗಿ ನಿಯೋಜಿತ ಘಟಕದ ವೆಚ್ಚದ 40% ಮತ್ತು 60% ಆರ್ಥಿಕ ಸಹಾಯವನ್ನು ಪಡೆಯಬಹುದು. ಸಹಾಯವನ್ನು ರಾಜ್ಯ ಮತ್ತು ಕೇಂದ್ರವು 40:60 ಅನುಪಾತದಲ್ಲಿ ಭರಿಸುತ್ತವೆ.

ಮೀನುಗಾರಿಕೆ ಇಲಾಖೆ, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ, ಭಾರತ ಸರ್ಕಾರ, ನವದೆಹಲಿಯ ನಿರ್ದೇಶನಗಳಿಗೆ ಅನುಸಾರವಾಗಿ, ಪಿಎಂಎಂಎಸ್‌ವೈ ಮಾರ್ಗಸೂಚಿಗಳ ಪ್ರಕಾರ ವಿವಿಧ ಘಟಕಗಳ ಅಡಿಯಲ್ಲಿ 2022–23 ನೇ ಸಾಲಿಗೆ ಒಟ್ಟು ರೂ.464.49 ಕೋಟಿಗಳವರೆಗಿನ ತಾತ್ಕಾಲಿಕ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಲ್ಲಿಸಲಾಗಿದೆ. ಆದಾಗ್ಯೂ, ಭಾರತ ಸರ್ಕಾರವು 2022–23 ನೇ ಸಾಲಿಗೆ ರೂ. 384.59 ಕೋಟಿಗಳಿಗೆ ಮಂಜೂರಾತಿ ನೀಡಿದೆ.

ಕರ್ನಾಟಕ ಸರ್ಕಾರವು 2022–23 ನೇ ಸಾಲಿಗೆ ರೂ. 26.56 ಕೋಟಿಗಳ ರಾಜ್ಯದ ಪಾಲು ಮತ್ತು ರೂ. 38.31 ಕೋಟಿಗಳ ಕೇಂದ್ರದ ಪಾಲು ಬಿಡುಗಡೆಗೊಳಿಸಿದೆ ಮತ್ತು ಸದರಿ ಮೊತ್ತವನ್ನು SNA ಖಾತೆಗೆ ಜಮೆ ಮಾಡಲಾಗಿದೆ. ದಿನಾಂಕ 31/03/2023 ರ ಅಂತ್ಯಕ್ಕೆ ರೂ. 179.83 ಕೋಟಿಗಳನ್ನು ವೆಚ್ಚ ಮಾಡಲಾಗಿದ್ದು, ರೂ. 14.73 ಕೋಟಿಗಳು SNA ಖಾತೆಯಲ್ಲಿ ಬಾಕಿ ಉಳಿದಿರುತ್ತದೆ.

### 6.3 ನಿರ್ದೇಶನ ಮತ್ತು ಆಡಳಿತ (2405–00–001–0–01)

ಈ ಲೆಕ್ಕ ಶೀರ್ಷಿಕೆಯಡಿ ರಾಜ್ಯ ವಲಯ ಯೋಜನೆಯಡಿ ಮಂಜೂರಾದ ಕೇಂದ್ರ ಕಛೇರಿ ಹಾಗೂ ಇತರೆ ಕಛೇರಿಗಳ ಸಿಬ್ಬಂದಿ ವೆಚ್ಚ, ಅಭಿಯಂತರರ ವೇತನ, ಗಣಕಯಂತ್ರ, ಫ್ಯಾಕ್ಸ್ ಯಂತ್ರ ಮತ್ತು ಇತರೆ ವಿದ್ಯುನ್ಮಾನ ಉಪಕರಣಗಳ ಅಳವಡಿಕೆ ಮತ್ತು ಅವುಗಳ ನಿರ್ವಹಣೆ, ವಾಹನ ಖರೀದಿ, ಇತ್ಯಾದಿ ವೆಚ್ಚವನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಇಲಾಖೆಯ ಕಛೇರಿಗಳ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಆಧುನೀಕರಣ ಮತ್ತು ದುರಸ್ತಿ ಕೆಲಸಗಳನ್ನು ತೆಗೆದುಕೊಳ್ಳಲು, ಮತ್ಸ್ಯಾಲಯಗಳ ಕಾಮಗಾರಿಗಳು ಮತ್ತು ನಿರ್ವಹಣೆಗೆ ಬೇಕಾಗುವ ಸಲಕರಣೆಗಳನ್ನು ಮತ್ತು ಇತರೆ ಸಾಮಗ್ರಿಗಳನ್ನು ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. 2022–23 ನೇ ಸಾಲಿನಲ್ಲಿ ರೂ.2936.63 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.41.09 ಲಕ್ಷಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಲಾಗಿದೆ. ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯಿಂದ ರೂ.50.00ಲಕ್ಷಗಳನ್ನು ಪುನರ್ವಿನಿಯೋಗದಿಂದ ಒದಗಿಸಲಾಗಿದೆ. ಅಲ್ಲದೇ ಲೆಕ್ಕ ಶೀರ್ಷಿಕೆ 2403–00–800–0–040–14 ರಿಂದ ರೂ.77.94 ಲಕ್ಷಗಳನ್ನು ಹಾಗೂ ವಿದ್ಯಾನಿಧಿ ಯೋಜನೆಯಿಂದ ರೂ.169.04 ಲಕ್ಷಗಳನ್ನು ಪುನರ್ವಿನಿಯೋಗದಿಂದ ಒದಗಿಸಲಾಗಿದೆ. ಒಟ್ಟು ರೂ.3274.70 ಲಕ್ಷ ಬಿಡುಗಡೆಯಾಗಿದ್ದು ರೂ.3088.72 ಲಕ್ಷ ವೆಚ್ಚ ಮಾಡಲಾಗಿದೆ.

### 6.4 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2021–22 ನೇ ಸಾಲಿನಲ್ಲಿ ರೂ.316.85 ಲಕ್ಷ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಸದರಿ ಯೋಜನೆಯಡಿ 1) ಸುಧಾರಿತ ವಂಶವಾಹಿನಿ ಮೀನುತಳಿಗಳ ಕೃಷಿಗೆ ನೆರವು ಯೋಜನೆ (ರೂ.200.00 ಲಕ್ಷ) ಹಾಗೂ 2) ಆರ್.ಎ.ಎಸ್ ಘಟಕಗಳಲ್ಲಿ ವಿವಿಧ ಮೀನು ತಳಿಗಳ ಉತ್ಪಾದನಾ ಸಾಮರ್ಥ್ಯ ಮತ್ತು ಆರ್ಥಿಕತೆಯ ಮೌಲ್ಯಮಾಪನ ಯೋಜನೆ (ರೂ.116.85 ಲಕ್ಷ) ಕಾರ್ಯಕ್ರಮಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಲಾಗಿದೆ. ಎರಡನೇ ಯೋಜನೆಗೆ ರೂ.92.00 ಲಕ್ಷಗಳು ಬಿಡುಗಡೆಯಾಗಿದ್ದು, ತದನಂತರ ಕೃಷಿ ಇಲಾಖೆಯ ಸೂಚನೆ ಮೇರೆಗೆ ಸದರಿ ಮೊತ್ತವನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಘಟಕದ SNA ಖಾತೆಗೆ ಅದ್ಯರ್ಪಿಸಲಾಗಿದೆ.

## 7. ಜಿಲ್ಲಾ ಪಂಚಾಯತ್ ಯೋಜನೆಗಳ ವಿವರ:

### 7.1 ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ:(2405–00–101–0–27)

ಈ ಯೋಜನೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿ ಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆಗೆ, ಜಿಲ್ಲೆಗಳಲ್ಲಿರುವ ಮತ್ಸ್ಯಾಲಯಗಳ ನಿರ್ವಹಣೆಗೆ ಸಾಮಗ್ರಗಳ ಖರೀದಿಗೆ, 2022–23 ನೇ ಸಾಲಿನಲ್ಲಿ ರೂ.452.85 ಲಕ್ಷ ಅನುದಾನ ಒದಗಿಸಲಾಗಿದ್ದು, ಇಲಾಖೆಯ ಕಟ್ಟಡಗಳ ಮತ್ತು ಮೀನುಮರಿ ಉತ್ಪಾದನಾ/ಪಾಲನಾ ಕೇಂದ್ರಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ರೂ.384.39 ಲಕ್ಷ ವೆಚ್ಚ ಮಾಡಲಾಗಿದೆ

### 7.2 ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ (2405–00–101–0–28):

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25ರಷ್ಟು ಗರಿಷ್ಠ ರೂ.30,000/– ಸಹಾಯಧನ ನೀಡಲಾಗುತ್ತದೆ. ಸ್ವಂತ ಜಮೀನಿನಲ್ಲಿ ಒಂದು ಎಕರೆ ಮೀನುಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇ.50 ಗರಿಷ್ಠ ರೂ.5000/– ಗಳ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯ ಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿಗಳ ಉತ್ಪಾದನಾ ಕೇಂದ್ರದಲ್ಲಿ ಮೀನುಮರಿಗಳ ಉತ್ಪಾದನೆಗೆ, ಮೀನುಮರಿಗಳ ಉತ್ಪಾದನಾ ಕೇಂದ್ರದಲ್ಲಿ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಮೀನುಮರಿಗಳ ಪಾಲನೆಗೆ, ಫಾರಂಗಳಲ್ಲಿ ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ಮೀನುಮರಿಗಳ ಸಾಗಾಟಕ್ಕಾಗಿ ವಾಹನಗಳ ಖರೀದಿ, ವಾಹನಗಳ ನಿರ್ವಹಣೆ ಮತ್ತು ಇತರ ಮೀನುಮರಿ ಉತ್ಪಾದನೆ ಮತ್ತು ಪಾಲನಾ ಕೇಂದ್ರಕ್ಕೆ ಅವಶ್ಯವಿರುವ ಸಲಕರಣೆಗಳ ಖರೀದಿ ವೆಚ್ಚಗಳಿಗೆ ಅವಕಾಶ ಕಲ್ಪಿಸಲಾಗಿದೆ.

2022-23ನೇ ಸಾಲಿನಲ್ಲಿ ಸದರಿ ಯೋಜನೆಯ ಅನುಷ್ಠಾನಕ್ಕೆ ರೂ.782.91 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.750.65 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

### 7.3 ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ (2405-00-101-0-30)

ಮೀನುಗಾರರು ಮೀನನ್ನು ತಾಜಾ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಶೇ.50ರಷ್ಟು ಗರಿಷ್ಠ ರೂ.2000/- ಸಹಾಯಧನ, ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25ರಷ್ಟು ಗರಿಷ್ಠ ರೂ.10000/-ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ, ಟೆಂಪೋ ರಿಕ್ಷಾ ಖರೀದಿಸಲು ಶೇ.25ರಷ್ಟು ಗರಿಷ್ಠ ರೂ.30,000/- ಸಹಾಯಧನ ಹಾಗೂ ನಾಲ್ಕುಚಕ್ರ ವಾಹನ ಖರೀದಿಸಲು ಶೇ.25ರಷ್ಟು ಗರಿಷ್ಠ ರೂ.35,000/- ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/-ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಶೇ.50ರಷ್ಟು ಗರಿಷ್ಠ ರೂ.5000/-ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

2022-23 ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.172.90 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.166.84 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ ಮತ್ತು 1250 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

### 7.4 ಪ್ರದರ್ಶನ ಮತ್ತು ತರಬೇತಿ (2405-00-101-0-32):

ಮೀನು ಕೃಷಿಯ ಬಗ್ಗೆ ಜಾಗೃತಿ ಮೂಡಿಸುವ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನಗಳಲ್ಲಿ ಮೀನುಗಾರಿಕೆ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು, ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು ಹಾಗೂ ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. 2022-23 ನೇ ಸಾಲಿನಲ್ಲಿ ಪ್ರದರ್ಶನ ಮತ್ತು ತರಬೇತಿಗೆ ರೂ.134.25 ಲಕ್ಷ ಅನುದಾನ ಒದಗಿಸಲಾಗಿದ್ದು ರೂ.131.95 ಲಕ್ಷ ವೆಚ್ಚ ಮಾಡಲಾಗಿದೆ.

### 7.5 ಜಿಲ್ಲಾ ಮತ್ತು ಇತರೆ ಸಿಬ್ಬಂದಿ (2405-00-101-0-26) ಜಿಲ್ಲಾ ವಲಯ:

ಸದರಿ ಯೋಜನೆಯಡಿ ಜಿಲ್ಲಾ ವಲಯದ ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚಗಳನ್ನು ಭರಿಸಲು ಅನುದಾನ ಕಲ್ಪಿಸಲಾಗಿದೆ. 2022-23 ನೇ ಸಾಲಿನಲ್ಲಿ ರೂ.3304.75 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ರೂ.2972.49 ಲಕ್ಷ ವೆಚ್ಚ ಮಾಡಲಾಗಿದೆ.

## 8. ವೆಚ್ಚ ಮತ್ತು ಆದಾಯ:

2021-22 ಮತ್ತು 2022-23 ನೇ ಸಾಲುಗಳಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ಆಗಿರುವ ವೆಚ್ಚ ಮತ್ತು ಆದಾಯದ ವಿವರಗಳು ಕೆಳಕಂಡಂತಿವೆ.

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಯೋಜನೆಗಳು | 2021–22 | 2022–23 |
|---|---|---|---|
| 1 | ರಾಜ್ಯ ವಲಯದ ಯೋಜನೆಗಳ ವೆಚ್ಚ | 16107.68 | 24432.18 |
| 2 | ಜಿಲ್ಲಾ ಪಂಚಾಯತ್ ಯೋಜನೆಗಳ ವೆಚ್ಚ | 2592.16 | 4406.32 |
| 3 | ಆದಾಯ | 2245.98 | 2628.00 |

**ಮೀನುಗಾರಿಕೆ ನಿರ್ದೇಶಕರು.**